ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ರಾಜ್ಯದಲ್ಲಿ ಜಿಲ್ಲಾ ಮುಖ್ಯ ರಸ್ತೆ ವಿಸ್ತೀರ್ಣ 49,974,63 ಕಿಮೀ ಮತ್ತು ರಾಜ್ಯ ಹೆದ್ದಾರಿಗಳ ವಿಸ್ತೀರ್ಣ 20,769,78 ಕಿಮೀ ಇರುತ್ತದೆ.

ಆ) ಹೌದು.

ಇ) ಲಭ್ಯವಿರುವ ಅನುದಾನದಲ್ಲಿ ರಸ್ತೆಗಳ ಉದ್ದ ಮತ್ತು ರಸ್ತೆಗಳ ಸ್ಥಿತಿಗತಿಗಳನ್ನು ಆಧರಿಸಿ ಸರಾಸರಿ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಹಾಗೂ ಗುಂಡಿ ಮುಚ್ಚಲು ಪ್ರತಿ ಕಿಮೀ ಗೆ ಸುಮಾರು ರೂ.30 ಸಾವಿರದಿಂದ ರೂ.35 ಸಾವಿರದವರೆಗೆ ಮತ್ತು ರಾಜ್ಯ ಹೆದ್ದಾರಿಗೆ ಸರಾಸರಿ ರೂ.35 ಸಾವಿರದಿಂದ 40 ಸಾವಿರದವರೆಗೆ ಅನುದಾನ ನಿಗದಿಪಡಿಸಿದೆ.

ಶುಗರ್–ಸೆಸ್‌ನಲ್ಲಿ ಅಭಿವೃದ್ಧಿ ಮಾಡಿದ ರಸ್ತೆಗಳ ಮಾಹಿತಿ

338 (612) ಶ್ರೀ ಸಿದ್ದು ಸವದಿ (ತೇರದಾಳ) :– ಮಾನ್ಯ ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಮೂರು ವರ್ಷಗಳಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಶುಗರ್–ಸೆಸ್‌ನಿಂದ ಅಭಿವೃದ್ಧಿ ಪಡಿಸಿದ ರಸ್ತೆಗಳು ಯಾವುವು (ಸಂಪೂರ್ಣ ಮಾಹಿತಿ ಒದಗಿಸುವುದು) ;

ಆ) ಶುಗರ್ ಸೆಸ್‌ನಲ್ಲಿ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಬರುವುದು ; ಅವುಗಳ ಆಯ್ಕೆಯನ್ನು ಯಾವ ಆಧಾರದ ಮೇಲೆ ಮಾಡಿ ಸರ್ಕಾರ ಅಭಿವೃದ್ಧಿ ಪಡಿಸುವುದು ;

ಇ) ಸುಮಾರು ನಾಲ್ಕೈದು ವರ್ಷದಿಂದ ಶುಗರ್–ಸೆಸ್‌ನಲ್ಲಿ ಯಾವುದೇ ರಸ್ತೆಗಳ ಅಭಿವೃದ್ಧಿ ಆಗದಿರಲು ಕಾರಣಗಳೇನು ;

ಈ) ಬಾಗಲಕೋಟೆ ಜಿಲ್ಲೆಯಲ್ಲಿ ಸದರಿ ಐದು ವರ್ಷಗಳಲ್ಲಿ ಕಾರ್ಖಾನೆಗಳಿಂದ ರಸ್ತೆಗಾಗಿ ಬಂದ ಸೆಸ್ ಹಣ ಎಷ್ಟು (ಪ್ರತಿ ಕಾರ್ಖಾನೆ ವೈಜ್ ಸಂಪೂರ್ಣ ಮಾಹಿತಿ ಒದಗಿಸಿರಿ) ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಶುಗರ್ ಸೆಸ್‌ನಿಂದ ಯಾವುದೇ ರಸ್ತೆಗಳನ್ನು ಅಭಿವೃದ್ಧಿ ಪಡಿಸಿರುವುದಿಲ್ಲ.

ಆ) ಸಕ್ಕರೆ ಕಾರ್ಖಾನೆಗೆ ಸಂಪರ್ಕ ಹೊಂದುವ ಯಾವುದೇ ರಸ್ತೆಗಳಿಗೆ (ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಮತ್ತು ಗ್ರಾಮೀಣ ರಸ್ತೆ) ವ್ಯವಸ್ಥಾಪಕ ನಿರ್ದೇಶಕರು, ಸಕ್ಕರೆ ಕಾರ್ಖಾನೆ ಇವರ ನಿರ್ದೇಶನದ ಮೇರೆಗೆ ಹಾಗೂ ಸೆಸ್ ಸಂಗ್ರಹಣಾ ಆಧಾರದ ಮೇಲೆ ರಸ್ತೆಗಳ ಸುಧಾರಣೆ ಕೈಗೊಳ್ಳಲಾಗುವುದು. ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿ ಶುಗರ್‌ಸೆಸ್‌ನಿಂದ ಯಾವುದೇ ರಸ್ತೆಯನ್ನು ಕಳೆದ 3 ವರ್ಷಗಳಿಂದ ಅಭಿವೃದ್ಧಿಪಡಿಸಿರುವುದಿಲ್ಲ. ಸದರಿ ರಸ್ತೆಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಸಕ್ಕರೆ ಕಾರ್ಖಾನೆ ಹಾಗೂ ಜಿಲ್ಲಾಧಿಕಾರಿಗಳ ಸಮನ್ವಯ ಸಭೆಯನ್ನು ಜರುಗಿಸಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರಿಗೆ ಸಲ್ಲಿಸಿ, ಕ್ರಿಯಾ ಯೋಜನೆ ಮಂಜೂರಾತಿ ಪಡೆದುಕೊಂಡ ನಂತರ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ಶುಗರ್ ಸೆಸ್ ಅಡಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಯಾವುದೇ ಅನುದಾನ ನೀಡದಿರುವುದರಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವುದಿಲ್ಲ.

ಈ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಅನುಬಂಧ – 1

ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಪಸೂಲಾದ ಸೆಸ್ ಹಾಗೂ ವಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾರ್ಖಾನೆಯ ಹೆಸರು	2006-07	2007-08	2008-09	2009-10	2010-11
1	ಬೀಳಗಿ ಶುಗರ್ಸ್	10.83	-	-	28.95	10.11
2	ಜಮ್ಖಂಡಿ ಶುಗರ್ಸ್	-	19.53	63.89	82.93	-
3	ಗೋದಾವರಿ ಶುಗರ್ಸ್	125.13	55.54	49.44	140.47	121.30
4	ನಿಡಗುಂದಿ ಶುಗರ್ಸ್	11.95	-	8.33	2.68	104.38
5	ರೈತರ ಸಹಕಾರ	43.98	-	-	36.75	93.19
6	ಪ್ರಭುಲಿಂಗೇಶ್ವರ ಶುಗರ್ಸ್	61.46	108.44	-	-	96.76
7	ಸದಾಶಿವ ಶುಗರ್ಸ್	-	-	-	9.35	30.85
8	ಎಸ್‌ಬಿವಿಎಲ್	-	-	-	-	65.00
9	ಕೇದಾರನಾಥ ಶುಗರ್ಸ್	-	-	-	7.65	16.37
10	ಬಾದಾಮಿ ಶುಗರ್ಸ್	-	-	-	-	-
11	ಜಮಖಂಡಿ ಶುಗರ್ಸ್	47.66	-		-	60.27